ವಸುಮತಿ ಉಡುಪ

# ಸರ್ಪಸುತ್ತು



"ಇಲ್ಲಿ ಎಂತಾಗಿದೇಂತ ಒಂಚೂರು ನೋಡೇ. ಕಟ್ಟಿರುವೆ ಕಚ್ಚಿದ ಹಂಗೆ ಉರೀತಿದೆ. ಮುಟ್ಟಿ ನೋಡ್ಕಂಡ್ರೆ ಸಣ್ಣಸಣ್ಣ ಗುಳ್ಳೆ. ರಾತ್ರಿ ಮಲಗಿದಾಗ ಇರುವೆ ಕಚ್ಚಿದ್ದಾ ಅಂತ?"

ಇಂತಾದ್ದೊಂದು ಚಿಲ್ಲರೆ ಮಾತು ಅದೆಷ್ಟೋ ತಿಂಗಳುಗಳಿಂದ ತಾನು ಕಂಡಿದ್ದ ಸವಿಗನಸನ್ನು ಮೆಟ್ಟಿ ಮುರಿಯುತ್ತದೆ ಎಂದು ಕಾವೇರಿ ಖಂಡಿತಾ ನಿರೀಕ್ಷಿಸಿರಲಿಲ್ಲ. "ಬಾ ಇತ್ಲಾಗೆ..." ಅಂದಳು ಕನ್ನಡಿಯ ಮುಂದೆ ಕೂತು ಮುಖದ ಕಾಂತಿವರ್ಧನೆಗೆಂದು ಶ್ರೀಗಂಧದ ಲೇಪವನ್ನು ಬಳಿದುಕೊಳ್ಳುತ್ತಿದ್ದ ಮದುಮಗಳು.

"ನಿಂದೆಲ್ಲಾ ಸವರಣೆ ಮುಗೀಲಿ. ಆಮೇಲೆ ನೋಡಿದ್ರೂ ಆಗುತ್ತೆ..."

"ಅಯ್ಯೋ, ಬಾರೇ ಮಾರಾಯ್ತೀ, ನೀನೊಬ್ಳು..." ಸ್ಟೂಲಿನ ಮೇಲೆ ಕೂತಿದ್ದ ಶುಭದಾಳ ಕಾಲಬುಡದಲ್ಲಿ ಅವಳಿಗೆ ಬೆನ್ನು ತಿರುಗಿಸಿ ಕೂತಳು ಕಾವೇರಿ. ಬೆನ್ನ